ಕರಾಸಕೈಅನಿನಿ
ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮೈಲ್:kssidcho@vsnl.com ವೆಬ್‌ಸೈಟ್:www.kssidc.co.in

ಸಂಖ್ಯೆ:ಸಮನ್ವಯ:ಯೋಜನೆ:ಅನುಷ್ಠಾನ:ಪ.ಜಾ:ಪ.ಪಂ:ಹಂಚಿಕೆ:2016 / 1293 ದಿನಾಂಕ 14.07.2016

22 JUL 2016

## ಕಛೇರಿ ಆದೇಶ

**ವಿಷಯ: ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಶೇ.50ರ ರಿಯಾಯಿತಿ ದರದಲ್ಲಿ ಕೈಗಾರಿಕಾ ನಿವೇಶನ / ಶೆಡ್‌ಗಳನ್ನು ಹಂಚಿಕೆ ಮಾಡುವ ಕುರಿತು.**

ಉಲ್ಲೇಖ:
1) ಸರ್ಕಾರಿ ಆದೇಶ ಸಂಖ್ಯೆ ಸಿಐ 147 ಸಿಎಸ್‌ಸಿ 2015 ದಿನಾಂಕ 22.07.2015
2) ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ ಸಿಐ 147 ಸಿಎಸ್‌ಸಿ 2015 ದಿನಾಂಕ 08.10.2015
3) ಕಛೇರಿ ಆದೇಶ ಸಂಖ್ಯೆ ಸಮನ್ವಯ:ಪ.ಜಾತಿ:ಪ.ಪಂ.ಮ.ನಿ.ಹಂ:ಸಧನ: 2016/4450 ದಿನಾಂಕ 26.02.2016
4) ಅಧಿಕ ನಿರ್ದೇಶಕರು(ಜಿಕೈಕೇ), ಕೈಗಾರಿಕಾ ಮತ್ತು ವಾಣಿಜ್ಯ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ ಕೈವಾಇ:ಜಿಕೈಕೇ: ಸಿ-2:ವಿಘಯೋ1:ಗಿಲುಯೋ: 2016-17 ದಿನಾಂಕ 11.04.2016
5) ದಿನಾಂಕ 22.06.2016ರ ನಿಗಮದ 339ನೇ ಆಡಳಿತ ಮಂಡಳಿ ಸಭೆ ನಡವಳಿಗಳು.
6) ಸರ್ಕಾರಿ ಆದೇಶ ಸಂಖ್ಯೆ ಸಿಐ 81 ಸಿಎಸ್‌ಸಿ 2015 ಬೆಂಗಳೂರು, ದಿನಾಂಕ 27.06.2016

-----

**ಪ್ರಸ್ತಾವನೆ:**

ಕರ್ನಾಟಕ ಸರ್ಕಾರದ 2015-16ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಣೆಯಾದಂತೆ ಹಾಗೂ ಸರ್ಕಾರದ ಹೊಸ ಕೈಗಾರಿಕಾ ನೀತಿ 2014-19ರಲ್ಲಿ ಅವಕಾಶ ಕಲ್ಪಿಸಿರುವಂತೆ, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹೆಚ್ಚುವರಿ ಸಹಾಯಧನ ನೀಡುವ ಕುರಿತು ಸರ್ಕಾರವು ಅನುಕ್ರಮವಾಗಿ ಹೊರಡಿಸಿರುವ ದಿನಾಂಕ 22.07.2015ರ ಸರ್ಕಾರದ ಆದೇಶ ಸಂಖ್ಯೆ ಸಿಐ:147:ಸಿಎಸ್‌ಸಿ:2015 ಬೆಂಗಳೂರು ಹಾಗೂ ದಿನಾಂಕ 08.10.2015ರ ಸೇರ್ಪಡೆ ಆದೇಶ ಸಂಖ್ಯೆ ಸಿಐ:147:ಸಿಎಸ್‌ಸಿ:2015ರಲ್ಲಿ ನಮೂದಿಸಿರುವಂತೆ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದಿಂದ (ಕೆ.ಎಸ್.ಎಸ್.ಐ.ಡಿ.ಸಿ.) ಹಂಚಿಕೆ ಮಾಡಲ್ಪಡುವ ಮಳಿಗೆಗಳ / ನಿವೇಶನಗಳ ಮೇಲೆ ರಿಯಾಯಿತಿಗಳನ್ನು ನೀಡಲು ಅನುಮೋದನೆ ನೀಡಿದ ಹಿನ್ನೆಲೆಯಲ್ಲಿ, ಸದರಿ ವಿಷಯದ ಬಗ್ಗೆ ಸೂಕ್ತ ಪ್ರಸ್ತಾವನೆಗಳನ್ನು ದಿನಾಂಕ 14.01.2016ರಂದು ಜರುಗಿದ ನಿಗಮದ 337ನೇ ಆಡಳಿತ ಮಂಡಳಿ ಸಭೆಯ ಮುಂದೆ ನಿರ್ಣಯಕ್ಕಾಗಿ ಮಂಡಿಸಲಾಗಿತ್ತು. ಮಂಡಳಿಯು ಪ್ರಸ್ತಾವನೆಗಳಿಗೆ ಅನುಮೋದನೆ ನೀಡಿದ ಹಿನ್ನೆಲೆಯಲ್ಲಿ, ಹೆಚ್ಚುವರಿ ಸಹಾಯಧನ ನೀಡಿಕೆ ಬಗ್ಗೆ ದಿನಾಂಕ 26.02.2016ರಂದು ಕಛೇರಿ ಆದೇಶವನ್ನು ಹೊರಡಿಸಲಾಗಿದೆ.

ಏತನ್ಮಧ್ಯೆ ಕರ್ನಾಟಕ ಸರ್ಕಾರದ 2016-17ರ ಆಯವ್ಯಯ ಭಾಷಣ ಕಂಡಿಕೆ 378(1)ರಲ್ಲಿ ಈ ಕೆಳಕಂಡಂತೆ ಘೋಷಣೆಯಾಗಿರುತ್ತದೆ.

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಉದ್ಯಮಿಗಳಲ್ಲಿ ಉದ್ಯಮಶೀಲತೆಯನ್ನು ಉತ್ತೇಜಿಸಲು ಹಾಗೂ ಕೈಗಾರಿಕಾ ಸಾಮರ್ಥ್ಯ ತುಂಬಲು ಕೆಳಕಂಡ ಕ್ರಮಗಳನ್ನು ಪ್ರಸ್ತಾವಿಸಿದೆ.

> **"ಶೇ.50 ದರದಲ್ಲಿ ಕೆ.ಐ.ಎ.ಡಿ.ಬಿ / ಕೆ.ಎಸ್.ಎಸ್.ಐ.ಡಿ.ಸಿ. ಯಿಂದ ಶೆಡ್ ಮತ್ತು ಭೂಮಿಯನ್ನು ಹಂಚಿಕೆ ಮಾಡಲಾಗುವುದು. ಭೂಮಿ ಮತ್ತು ಶೆಡ್‌ಗಳ ಮೌಲ್ಯದ ಪಾವತಿಯನ್ನು ಕಂತುಗಳಲ್ಲಿ ಪರಿಗಣಿಸಲಾಗುವುದು. ಇದರಲ್ಲಿ ಶೇ.50 ರಷ್ಟನ್ನು ಮೊದಲಿಗೆ ಪಾವತಿಸಬೇಕಾಗಿದ್ದು, ಬಾಕಿ ಶೇ.50 ರಷ್ಟನ್ನು 8 ಸಮ ತ್ರೈಮಾಸಿಕ ಕಂತುಗಳಲ್ಲಿ ಪಾವತಿಸಬೇಕಾಗಿರುತ್ತದೆ."**

..2..

ಅದರಂತೆ ಸದರಿ ವಿಷಯದ ಪ್ರಸ್ತಾವನೆ ಸಲ್ಲಿಕೆ ಸಂಬಂಧದ ಸಾಧಕ-ಬಾಧಕಗಳ ಬಗ್ಗೆ ನಿಗಮದ ನಿಯಮಾವಳಿಗಳನ್ವಯ ಕೂಲಂಕಷ ರೀತಿಯಲ್ಲಿ ಪರಿಶೀಲಿಸಿದ ತದನಂತರದಲ್ಲಿ ಸೂಕ್ತ ಪ್ರಸ್ತಾವನೆಗಳನ್ನು ದಿನಾಂಕ 22.06.2016 ರಂದು ಜರುಗಿದ ನಿಗಮದ 339ನೇ ಆಡಳಿತ ಮಂಡಳಿ ಸಭೆಯ ಮುಂದೆ ಮಂಡಳಿಯ ಸಹಮತ ಹಾಗೂ ಒಪ್ಪಿಗೆ / ನಿರ್ಣಯಕ್ಕಾಗಿ ಮಂಡಿಸಲಾಗಿತ್ತು.

ಮಂಡಳಿಯು ಪ್ರಸ್ತಾವನೆಯನ್ನು ಒಪ್ಪಿತು ಹಾಗೂ ಉಳಿದ ಶೇ. 50ರ ಮೊತ್ತವನ್ನು ಸರ್ಕಾರದಿಂದ ಮರುಪಾವತಿ ಪಡೆಯಬೇಕು ಎಂದು ನಿರ್ಣಯಿಸಿತು ಹಾಗೂ ಈ ಸಂಬಂಧ ಸರ್ಕಾರಕ್ಕೆ ಪತ್ರ ಬರೆಯಲು ವ್ಯವಸ್ಥಾಪಕ ನಿರ್ದೇಶಕರಿಗೆ ಆದೇಶಿಸಿತು.

ಮಂಡಳಿಯ ನಿರ್ಣಯದನ್ವಯ ಸರ್ಕಾರಕ್ಕೆ ಪತ್ರವನ್ನು ಬರೆಯಲು ಉದ್ದೇಶಿಸಲಾಗಿತ್ತು. ಏತನ್ಮಧ್ಯೆ, ಸರ್ಕಾರವು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (6)ರಂತೆ ಸರ್ಕಾರಿ ಆದೇಶವನ್ನು ಹೊರಡಿಸಿ, 2016-17ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಲಾಗಿರುವಂತೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ಯಮಿಗಳಿಗೆ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದಿಂದ ಕೈಗಾರಿಕಾ ನಿವೇಶನ / ಮಳಿಗೆಗಳನ್ನು ಶೇ. 50ರ ರಿಯಾಯಿತಿ ದರದಲ್ಲಿ ಈ ಕೆಳಕಂಡ ನಿಬಂಧನೆಗಳಿಗೊಳಪಡಿಸಿ ಹಂಚಿಕೆ ಮಾಡಲು ಅನುಮೋದನೆ ನೀಡಿದೆ.

- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹಂಚಿಕೆಯಾಗುವ ಕೈಗಾರಿಕಾ ನಿವೇಶನ / ಮಳಿಗೆಯ ಶೆ. 50ರ ರಿಯಾಯಿತಿ ಮೌಲ್ಯವನ್ನು ಸರ್ಕಾರದಿಂದ ಸಂಬಂಧಿಸಿದ ಸಂಸ್ಥೆಗಳಿಗೆ (ಕೆ.ಎಸ್.ಎಸ್.ಐ.ಡಿ.ಸಿ.) ಪಾವತಿ ಮಾಡುವುದು.
- ಈ ಶೇ.50ರ ರಿಯಾಯಿತಿ ಮೌಲ್ಯವನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ವಿಶೇಷ ಘಟಕ ಯೋಜನೆ / ಗಿರಿಜನ ಉಪ ಯೋಜನೆ (SCSP/TSP) ಅಡಿಯಲ್ಲಿ ಹಂಚಿಕೆಯಾಗುವ ಆಯವ್ಯಯದಿಂದ ಭರಿಸತಕ್ಕದ್ದು ಮತ್ತು SCSP/TSP ಯೋಜನೆಯಡಿಯಲ್ಲಿ ಈ ಕಾರ್ಯಕ್ರಮಕ್ಕೆ ರೂಪಿಸಲಾಗಿರುವ ಮಾರ್ಗಸೂಚಿಗಳನ್ನು ಪಾಲಿಸತಕ್ಕದ್ದು.
- ಹಂಚಿಕೆ ಪಡೆದ ಉದ್ದಿಮೆದಾರರಿಂದ ನಿವೇಶನ / ಮಳಿಗೆಯ ಶೇ. 25ರಷ್ಟು ಮೌಲ್ಯವನ್ನು ಮೊದಲು (Upfront) ಸಂಬಂಧಿಸಿದ ಸಂಸ್ಥೆಗಳು ಪಡೆದುಕೊಳ್ಳತಕ್ಕದ್ದು, ನಂತರ, ಉಳಿದ ಶೇ. 25ರಷ್ಟು ನಿವೇಶನ / ಮಳಿಗೆಯ ಮೌಲ್ಯದ ಮೊತ್ತವನ್ನು 8 ಸಮ ತ್ರೈಮಾಸಿಕ ಕಂತುಗಳಲ್ಲಿ ಸೂಕ್ತ ಬಡ್ಡಿ ದರದೊಂದಿಗೆ ವಸೂಲಾತಿ ಮಾಡಿಕೊಳ್ಳತಕ್ಕದ್ದು.

ನಿಗಮವು ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸುವ ಸರ್ಕಾರಿ ಆದೇಶಗಳನ್ನು ಹಾಗೂ ಮಂಡಳಿಯ ನಿರ್ದೇಶನಗಳನ್ನು ಅನುಸರಿಸುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಸದರಿ ವಿಷಯದ ಬಗ್ಗೆ ಈಗಾಗಲೇ ಮಂಡಳಿಯು ಸೂಕ್ತ ನಿರ್ಣಯವನ್ನು ಕೈಗೊಂಡಿರುವ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

## ಆ ದೇ ಶ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದಿಂದ (ಕೆ.ಎಸ್.ಎಸ್.ಐ.ಡಿ.ಸಿ.) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆಗಳಿಗೆ ಹಂಚಿಕೆಯಾಗುವ ಕೈಗಾರಿಕಾ ನಿವೇಶನ / ಮಳಿಗೆಗಳನ್ನು ಶೇ.50ರ ರಿಯಾಯಿತಿ ದರದಲ್ಲಿ ಈ ಕೆಳಕಂಡ ನಿಬಂಧನೆಗಳಿಗೊಳಪಟ್ಟು ಹಂಚಿಕೆ ಮಾಡಲು ಆದೇಶಿಸಲಾಗಿದೆ.

- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹಂಚಿಕೆಯಾಗುವ ಕೈಗಾರಿಕಾ ನಿವೇಶನ / ಮಳಿಗೆಯ ಶೇ 50ರ ರಿಯಾಯಿತಿ ಮೌಲ್ಯವನ್ನು ಸರ್ಕಾರದಿಂದ ನಿಗಮಕ್ಕೆ (ಕೆ.ಎಸ್.ಎಸ್.ಐ.ಡಿ.ಸಿ) ಪಾವತಿ ಮಾಡತಕ್ಕದ್ದು.

..3..

- ನಿಗಮದಿಂದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರುಗಳಿಗೆ ಹಂಚಿಕೆ ಮಾಡಲ್ಪಡುವ ಮಳಿಗೆ/ನಿವೇಶನಗಳಿಗೆ ಹಂಚಿಕೆ ಸಂದರ್ಭದಲ್ಲಿಯೇ ಅರ್ಹ ಶೇಕಡ 50ರಷ್ಟು ರಿಯಾಯಿತಿಯನ್ನು ಮೊದಲಿಗೆ ನಿಗಮದ ನಿಧಿಯಿಂದಲೇ ವಿಸ್ತರಿಸಿ, ತದನಂತರ ಪ್ರಸ್ತುತ ಚಾಲ್ತಿಯಲ್ಲಿರುವಂತೆಯೇ ನಿಗಮವು ಈ ಸಂಬಂಧ ವ್ಯಯಿಸಿರುವ ಶೇ.50 ರಿಯಾಯಿತಿ ಬಾಬ್ತು ಮೊಬಲಗನ್ನು ಗಿರಿಜನ ಉಪಯೋಜನೆ (T.S.P), ವಿಶೇಷ ಘಟಕ ಯೋಜನೆ (S.C.P) ಅಥವಾ ಸರ್ಕಾರದ ಮತ್ತ್ಯಾವುದೇ ಯೋಜನೆಯಡಿ ಹಿಂಭರ್ತಿ ನೀಡುವ ನಿಬಂಧನೆಗೊಳಪಟ್ಟಿರುತ್ತದೆ ಹಾಗೂ ಈ ಕಾರ್ಯಕ್ರಮಕ್ಕೆ ರೂಪಿಸಲಾಗಿರುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
- ಹಂಚಿಕೆ ಪಡೆದ ಉದ್ದಿಮೆದಾರರಿಂದ ನಿವೇಶನ / ಮಳಿಗೆಯ ಶೇಕಡಾ 25ರಷ್ಟು ಮೌಲ್ಯವನ್ನು ಮೊದಲು (Upfront) ನಿಗಮವು ಪಡೆದುಕೊಳ್ಳತಕ್ಕದ್ದು ನಂತರ, ಉಳಿದ ಶೇಕಡಾ 25ರಷ್ಟು ನಿವೇಶನ / ಮಳಿಗೆಯ ಮೌಲ್ಯದ ಮೊತ್ತವನ್ನು 8 ಸಮ ತ್ರೈಮಾಸಿಕ ಕಂತುಗಳಲ್ಲಿ **ವಾರ್ಷಿಕ ಶೇಕಡ 12.5ರ ಬಡ್ಡಿ ದರದೊಂದಿಗೆ** ವಸೂಲಾತಿ ಮಾಡಿಕೊಳ್ಳತಕ್ಕದ್ದು.

ಸದರಿ ಆದೇಶವು ದಿನಾಂಕ **01.04.2016** ರಿಂದ ಅನ್ವಯವಾಗುವಂತೆ ಹಾಗೂ ಈ ಬಗ್ಗೆ ಮುಂದಿನ ಆದೇಶ ಹೊರಡಿಸುವವರೆವಿಗೂ ಜಾರಿಯಲ್ಲಿರುತ್ತದೆ.

ಈ ಹಿಂದೆ ನಿಗಮದಿಂದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹಂಚಿಕೆ ಮಾಡುವ ಮಳಿಗೆ/ನಿವೇಶನಗಳಿಗೆ ಹೆಚ್ಚುವರಿ ಸಹಾಯಧನ ನೀಡುವ ಬಗ್ಗೆ ಹೊರಡಿಸಲಾಗಿರುವ ಉಲ್ಲೇಖ (3)ರಲ್ಲಿನ ನಿಗಮದ ಕಛೇರಿ ಆದೇಶ ಸಂಖ್ಯೆ ಸಮನ್ವಯ:ಪ.ಜಾತಿ:ಪ.ಪಂ.ಮ.ನಿ.ಹಂ:ಸಧನ:2016/ 4450 ದಿನಾಂಕ 26.02.2016 ಅನ್ನು ಹಿಂಪಡೆಯಲಾಗಿದೆ.

ಮೇಲೆ ಸೂಚಿಸಿರುವ ಎಲ್ಲಾ ಆದೇಶಗಳನ್ನು ಕಟ್ಟುನಿಟ್ಟಾಗಿ ಹಾಗೂ ಕಡ್ಡಾಯವಾಗಿ ಪಾಲಿಸತಕ್ಕದ್ದು.

22.7.

ವ್ಯವಸ್ಥಾಪಕ ನಿರ್ದೇಶಕರು

**ಇವರಿಗೆ,**

1. ಪ್ರಧಾನ ವ್ಯವಸ್ಥಾಪಕರು(ಆಡಳಿತ ಮತ್ತು ಭೂಸ್ವಾಧೀನ)/(ಕೈವ ಮತ್ತು ಹಣಕಾಸು)/(ವಾಣಿಜ್ಯ), ಕರಾಸಕೈಅನಿನಿ, ಬೆಂಗಳೂರು.
2. ಮುಖ್ಯ ಅಭಿಯಂತರರು, ಕರಾಸಕೈಅನಿನಿ, ಬೆಂಗಳೂರು
3. ಉಪ ಪ್ರಧಾನ ವ್ಯವಸ್ಥಾಪಕರು, ವಲಯ-1/2, (ವಾಣಿಜ್ಯ), ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಬೆಂಗಳೂರು, ಹುಬ್ಬಳ್ಳಿ,
4. ಉಪ ಪ್ರಧಾನ ವ್ಯವಸ್ಥಾಪಕರು, ಹಣಕಾಸು/ಆಂಲೆಪ, ಕರಾಸಕೈಅನಿನಿ, ಬೆಂಗಳೂರು.
5. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ರಾಜಾಜಿನಗರ (ನ)/ (ಗ್ರಾ)/ ವಾ.ಲೆ(ಪ್ರ) / ವ&ಕಾಲೆ(ಪ್ರ)/(ಭೂಸ್ವಾಧೀನ/ಸಾ.ಸಂ)ಸಿಬ್ಬಂದಿ/ಪೀಣ್ಯ/ತುಮಕೂರು/ದಾವಣಗೆರೆ/ಹುಬ್ಬಳಿ/ಬೆಳಗಾವಿ/ಕಲಬುರಗಿ/ಮೈಸೂರು/ ಶಿವಮೊಗ್ಗ/ ಮಂಗಳೂರು.
6. ಕಾರ್ಯಪಾಲಕ ಅಭಿಯಂತರರು(ಸಿವಿಲ್)/(ವಿ), ಕರಾಸಕೈಅನಿನಿ, ಬೆಂಗಳೂರು, ಹುಬ್ಬಳ್ಳಿ, ಮೈಸೂರು, ಕಲಬುರಗಿ
7. ವ್ಯವಸ್ಥಾಪಕರು (ಸಮನ್ವಯ) / (ಕಾನೂನು), / ಬೆಂ-ನಗರ / ಕರಾಸಕೈಅನಿನಿ, ಬೆಂಗಳೂರು/ ವೀರಸಂದ್ರ/ಹುಬ್ಬಳ್ಳಿ
8. ವ್ಯವಸ್ಥಾಪಕರು[ಗಣಕಯಂತ್ರ], ಕರಾಸಕೈಅನಿನಿ, ಬೆಂಗಳೂರು ಮಾಹಿತಿಗಾಗಿ ಹಾಗೂ ನಿಗಮದ ವೆಬ್‌ಸೈಟ್‌ನ ಕಛೇರಿ ಆದೇಶಗಳ ಕಡತದಲ್ಲಿ ಪ್ರಕಟಿಸಲು ಸೂಚಿಸಿದೆ.
9. ಸಹಾಯಕ ಕಾರ್ಯಪಾಲಕ ಅಬಿಯಂತರು(ಸಿವಿಲ್)/(ವಿದ್ಯುತ್), ಕರಾಸಕೈಅನಿನಿ, ಬೆಂಗಳೂರು/ಹುಬ್ಬಳ್ಳಿ/ ಮೈಸೂರು/ ತುಮಕೂರು/ಬೆಳಗಾವಿ/ಗುಲ್ಬರ್ಗಾ/ಶಿವಮೊಗ್ಗ/ಮಂಗಳೂರು.
10. ಸಹಾಯಕ ವ್ಯವಸ್ಥಾಪಕರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಬಳ್ಳಾರಿ.

**ಪ್ರತಿಗಳು :**

1. ಅಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ.
2. ಉಪಾಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ.
3. ವ್ಯವಸ್ಥಾಪಕ ನಿರ್ದೇಶಕರವರ ಆಪ್ತ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು ಮಾಹಿತಿಗಾಗಿ.